

ಥಾಯ್ಲೆಂಡ್‌ನಲ್ಲಿ ಈಚೆಗೆ ಜಂಬೋ ಕ್ವೀನ್ ಸೌಂದರ್ಯ ಸ್ಪರ್ಧೆ ನಡೆಯಿತು. ಎಲ್ಲಾ 80 ಕೆಜಿ ಮೇಲೆ ತೂಗುವವರು. 30 ಮಹಿಳೆಯರು ಭಾಗವಹಿಸಿದ್ದರಂತೆ. ಸಂಘಟಕರು ಕನಿಷ್ಠ ನೂರು ಮಹಿಳೆಯರ ನಿರೀಕ್ಷೆಯಲ್ಲಿದ್ದರು. ನೂರು ಕ್ವಿಂಟಲ್ ತೂಗಿದರೂ ಕೂಡಾ 50 ಕೆಜಿಯ ಆಜೂಬಾಜು ಹೇಳುವವರೇ ಭರ್ತಿ ಇರುವಾಗ ಮೂವತ್ತು ಮಂದಿಯಾದರೂ ಬಂದರು ಎಂದು ಸಂಘಟಕರು ನಿಟ್ಟುಸಿರು ಬಿಟ್ಟಿರಬಹುದು.

ಫ್ಯಾಷನ್ ಷೋನಲ್ಲಿ ಯುವತಿಯರು, ಪುರುಷರು, ಮಕ್ಕಳು, ವೃದ್ಧರು.. ಎಲ್ಲಾ ಕ್ಯಾಟ್ ವಾಕ್ ಮಾಡಾಯ್ತು. ಈಗ ಮುಂಬೈನ ಕಂಪೆನಿಯೊಂದು ಹಿಜರಾಗಳನ್ನು ರ್‍ಯಾಂಪ್ ಮೇಲೆ ಓಡಾಡಿಸಿದೆ. ವಿಶೇಷ ಉಡುಪುಗಳ ವಿನ್ಯಾಸಕ್ಕಿಂತ ಮೇಕಪ್‌ಗೇ ಹೆಚ್ಚು ಸಮಯ ಹಿಡಿಯಿತಂತೆ.





ಕ್ರಿಸ್‌ಮಸ್ ಬಂತೆಂದರೆ ಸ್ಪೇನಿನಲ್ಲಿ ಕೆಗಾನೆರ್ ಬೊಂಬೆಗಳದ್ದೇ ಕಾದಾಟ. ಮುಚ್ಚಿಟ್ಟ ಬೊಂಬೆಗಳ ಹುಡುಕಾಟದ್ದೇ ಅಲ್ಲಿನ ವಿಶೇಷ. ಆದರೆ ಬೊಂಬೆ ತಯಾರಿಕೆಯಲ್ಲೂ ಪೈಪೋಟಿ. ಈ ಬಾರಿ ಹಿಲರಿ ಕ್ಲಿಂಟನ್, ಒಬಾಮ ಹಾಗೂ ರಾಣಿ ಎಲಿಜಬೆತ್ ಬೊಂಬೆಗಳ ಮಧ್ಯೆ ಪೈಪೋಟಿ ಇತ್ತಂತೆ. ಹಿಲರಿ-ಒಬಾಮ ಮಧ್ಯೆ ಸ್ಪರ್ಧೆಯೇನೋ ಸರಿ, ಆದರೆ ಮಧ್ಯೆ ರಾಣಿ ಯಾಕೆ ಬಂದಳೋ!

ಅಮೆರಿಕದ ಟಿವಿಯಲ್ಲಿ ಡ್ಯಾನ್ಸ್ ಮೂಲಕ ತೂಕ ಕಳೆದುಕೊಳ್ಳುವ ರಿಯಾಲಿಟಿ ಷೋ ನಡೆಯುತ್ತಿದೆ. ಇದಕ್ಕೆ ಭಾರಿ ನೂಕುನುಗ್ಗಲು. ಭಾರಿ ದೇಹದ ಮಹಿಳೆಯರ ಆಡಿಷನ್‌ಗೆ ಜಾಗ ಸಿಗದೆ ಸಂಘಟಕರು ಪರದಾಡಿದರಂತೆ. ಕಟ್ಟಡಕ್ಕೆ ವಿಮೆ ಇದ್ದರೂ ಮಾಲೀಕರು ಯಾಕೆ ಒಪ್ಪಲಿಲ್ಲವೋ!



ಅಮೆರಿಕದ ಡೆಟ್ರಾಯಿಟ್‌ನಲ್ಲಿ ವ್ಯಕ್ತಿಯೊಬ್ಬ ಕಾಫಿ ಬಾರ್‌ಗೆ ಬಂದು ಕಾಫಿ ಕೇಳಿದನಂತೆ. ಕಾಫಿ ಜೊತೆಗೆ ಬ್ರೆಡ್‌ಗೆ ಬಟರ್ ಹಚ್ಚಲು ಚಾಕು ಬೇಕಾ ಎಂದು ಕೇಳಿದ ಮಾಣಿಗೆ ಆ ಮಧ್ಯವಯಸ್ಕನ ಎದೆಯ ಮಧ್ಯೆ ಎರಡಿಂಚು ಹೊಕ್ಕಿದ ಚಾಕು ಕಾಣಬೇಕೆ! ಮಾಣಿ ಬ್ರೆಡ್ ತರುವ ಬದಲು ಆ್ಯಂಬುಲೆನ್ಸ್ ತಂದನಂತೆ. ಆಸ್ಪತ್ರೆ ಸೇರಿದ ವ್ಯಕ್ತಿ ನಂತರ ಮನೆಗೆ ಹೋದನಾ? ಇಲ್ಲ, ಸೀದಾ ಜೈಲಿಗೆ. ದರೋಡೆ ಮಾಡುವಾಗ ಯಾರೋ ಚಾಕುವನ್ನು ಕ್ಯಾಚ್ ಎಂದು ಎಸೆದಿದ್ದರು.

ಅಮೆರಿಕದ ಇಲಿನಾಯ್ಸ್ ಮೃಗಾಲಯ ಅಧಿಕಾರಿಗಳ ತಲೆಯೇ ತಲೆ. ಹಿಮಸಾರಂಗದ ಸೆಗಣಿಯ ನೆಕ್ಲೇಸ್ ಮಾಡಿ ಮಾರಿ 21 ಸಾವಿರ ಡಾಲರ್ ಗಳಿಸಿದರಂತೆ. ಸರಕ್ಕೊಂದು ಟ್ಯಾಗ್. ಅದರಲ್ಲಿ 'ಜಾದೂ ಮಣಿಗಳು' ಎಂದು ಮುದ್ರಿಸಿದ್ದರಂತೆ. ಭಾರತದಲ್ಲಿ ಮಾತ್ರವಲ್ಲ ಬಕ್ರಾಗಳಿರುವುದು.



ರೋಮಾನಿಯಾದಲ್ಲಿ ಕಾಡುಪ್ರಾಣಿಗಳನ್ನು ಸಾಕುವವರಿಂದಾಗಿ ಸರ್ಕಾರಕ್ಕೆ ತಲೆನೋವಂತೆ. ಸಿಂಹ, ಚಿರತೆ ಮರಿಗಳ ಜೊತೆ ವಾಕಿಂಗ್ ಹೋಗುವವರು ಜಾಸ್ತಿಯಾಗಿದ್ದಾರಂತೆ. ಆದರೆ ಮರಿ ಬೆಳೆದಂತೆಲ್ಲ ಮಾಲೀಕ ತಲೆನೋವನ್ನು ಸರ್ಕಾರಕ್ಕೆ ವರ್ಗಾಯಿಸಿ ಮುಗುಮ್ಮಾಗಿರುವುದು ದೊಡ್ಡ ಸಮಸ್ಯೆಯಾಗಿದೆ. ಅಂದರೆ ಸರ್ಕಾರಕ್ಕೆ ಕೊಡುಗೆ ಕೊಡುತ್ತಾರಾ? ಇಲ್ಲ, ಪೊಲೀಸ್ ಠಾಣೆಯ ಹೊರಗಿನ ಕಂಬಕ್ಕೆ ಸಿಂಹ, ಚಿರತೆಗಳು. ಹೀಗಾಗಿ ಪೇದೆಗೆ ಹಗಲು- ರಾತ್ರಿ ಕಂಬ ಕಾಯುವ ಕೆಲಸ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65